ಜಾಕೋಬ್ ಡಿಸೋಜ, ಕುರುವಳ್ಳಿ
*ಆಶ್ವಾಸನೆಗೂ, ಭರವಸೆಗೂ ಇರುವ ವ್ಯತ್ಯಾಸವೇನು?*



ಆಶ್ವಾಸನೆಯಿಂದ ಭರವಸೆ ಮೂಡುತ್ತದೆ, ಆದರೆ ಭರವಸೆಯಿಂದ ಆಶ್ವಾಸನೆ ಮೂಡುವುದಿಲ್ಲ.

ಅಶ್ವಿನಿ ಹೆಗಡೆ, ಬೈರುಂಬೆ
*ಒಂದು ವರ್ಷದಲ್ಲಿ ಕಲಿತದ್ದನ್ನು ಮೂರು ತಾಸಿನಲ್ಲಿ ಪರೀಕ್ಷಿಸಿ ಅವರ ಬುದ್ಧಿ ಮತ್ತೆ ಅಳೆಯುವುದು ನ್ಯಾಯವೇ?*
ಇಡೀ ವರ್ಷ ಕಲಿತರೂ ಮೂರು ತಾಸಿನಷ್ಟು ಸಹ ಉತ್ತರ ಹೇಳದಿದ್ದರೆ ಸರಿಯೇ?

ಜೆ.ಆರ್.ಆದಿನಾರಾಯಣಮುನಿ, ಆದಿವಾಲ
*ಜಾತ್ಯತೀತತೆಯ ಸೂತ್ರ ಯಾವುದು?*
ಅತಿಯಾಗಿ ಜಾತಿಗಳನ್ನು ವಿಂಗಡಿಸುವುದೇ ಎಂದನೊಬ್ಬ ಪೂಜಾರಿ.

ಎನ್.ಗೋಪಾಲರಾವ್, ಹೊಸಕೆರೆಹಳ್ಳಿ
*ಅಂದು ಕುರುಕ್ಷೇತ್ರದಲ್ಲಿ ನೀರೊಳಗಿರ್ದು ಬೆವರ್ದನುರಗಪತಾಕನ್; ಇಂದು ದೆಹಲಿಯಲ್ಲಿ ಏಸಿ ಕಾರೊಳಿರ್ದು ಆರು ಬೆವರ್ದರ್?*
ಆವಾವ ಕು–ವರರಿಗೆ ಮತದಾರರ್ ಆಧಃಪತನವಂ ತೋರಿದರೋ ಅವರೆಲ್ಲರುಂ ಬೆವರ್ದರ್

ಶಿವಮೊಗ್ಗ ರಮೇಶ, ಮೈಸೂರು
*ಜನಪ್ರತಿನಿಧಿಯಾಗಿ ಸಮಾಜಸೇವೆ ಮಾಡಲು ಹಾತೊರೆಯುವ ವ್ಯಕ್ತಿಗಳಿಗೆ ತಮ್ಮ ಕುಟುಂಬದಲ್ಲೇ ನೆಮ್ಮದಿ ಇರುವುದಿಲ್ಲವಲ್ಲ?*
ದೂರದೃಷ್ಟಿ ಇರುವವರಿಗೆ ಹತ್ತಿರದ ವಸ್ತುಗಳು ಕಾಣದಿರುವುದೇ ಇದಕ್ಕೆ ಕಾರಣವಂತೆ!

ಎಂ.ಎನ್.ಸೋಮಶೇಖರ್, ಮೈಸೂರು
*ಹಾವು ಹಾಲನ್ನು ಕುಡಿಯುವುದಿಲ್ಲವೆಂದು ಗೊತ್ತಿದ್ದೂ ಸಹ ಜನರು ಹಾಲನ್ನೇಕೆ ಅರ್ಪಿಸುತ್ತಾರೆ?*
ಉಪಯೋಗವಿಲ್ಲವೆಂದು ತಿಳಿದಿದ್ದರೂ ಹಾವಿಗೆ ಹಾಲು, ಅಯೋಗ್ಯರಿಗೆ ಮತ ನೀಡುವುದು ನಮ್ಮ ಸಂಪ್ರದಾಯ!

## ಬಹುಮಾನಿತ ಪ್ರಶ್ನೆ

ಪ್ರವೀಣ ಬಿ ಹೊನಖಾಂಡೆ, ಮಾಲಗಳ್ಳಿ,
*ಚಳ್ಳೆಹಣ್ಣು ಎಂದರೇನು? ಇದನ್ನು ಯಾರು, ಯಾರಿಗೆ, ಯಾವಾಗ ತಿನ್ನಿಸುತ್ತಾರೆ?*
ಇದು ಗರ್ವಭಂಗಿ ಮರದಲ್ಲಿ ಬಿಡುವ ಹಣ್ಣು. ಇದನ್ನು ಗರ್ವದಿಂದ ನಡೆಯುವವರಿಗೆ ಪಾಠ ಕಲಿಸುವ ಸಾಮರ್ಥ್ಯವಿರುವವನು ಗರ್ವಿಯ ಅಹಂಕಾರಭೇದನ ಸಮಯದಲ್ಲಿ ತಿನ್ನಿಸುತ್ತಾನೆ.

ಜೆ.ಪ್ರದೀಪಕುಮಾರ, ಹೂವಿನಹಡಗಲಿ
*ಶಕುನ, ವಾಸ್ತುಗಳನ್ನು ನಂಬುವ ಇಂದಿನ ರಾಜಕಾರಣಿಗಳಿಗೆ ಜ್ಞಾನೋದಯವಾಗುವುದು ಯಾವಾಗ?*
ನನ್ನ ಕಾಲದಲ್ಲಂತೂ ಅಲ್ಲ ಎಂದನಂತೆ ಚತುರ್ಮುಖ ಬ್ರಹ್ಮ!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
*ದಾನ ಮಾಡಬೇಕೆಂದಿದ್ದೇನೆ; ಅನ್ನದಾನ, ವಿದ್ಯಾದಾನ, ವಸ್ತ್ರದಾನ ಇವುಗಳಲ್ಲಿ ಯಾವುದನ್ನು ಮಾಡಲಿ ಗುರುದೇವ?*
ಬಡವರಿಗೆ ಅನ್ನದಾನವನ್ನೂ, ಮಂತ್ರಿಗಳಿಗೆ ವಿದ್ಯಾದಾನವನ್ನೂ, ತಾರೆಯರಿಗೆ ವಸ್ತ್ರದಾನವನ್ನೂ ಮಾಡೈ ಶಿಷ್ಯೋತ್ತಮಾ!

ವಿದ್ಯಾ ಎನ್. ಪೈ, ಕಾಸರಗೋಡು
*ಸ್ವರ್ಗದಲ್ಲಿ ಮದುವೆಗಳು ನಿಶ್ಚಯವಾಗುವುದಾದರೆ ನರಕದಲ್ಲಿ...?*
ಸಂಸಾರಗಳು ಜರುಗುತ್ತವೆ.

ಗಾಯತ್ರಿ, ರಾಜಾಜಿನಗರ
*ಚಪ್ಪಲಿ ಎಸೆಯುವುದು ಯಾವ ಸಂಸ್ಕೃತಿ?*
ಕರತಾಡನ ಎಂಬುದು ಕೆರತಾಡನ ಎಂದು ತಪ್ಪಾಗಿ ಮುದ್ರಣವಾದಂದಿನಿಂದ ನಮ್ಮಲ್ಲೇ ಆರಂಭವಾದ ಸಂಸ್ಕೃತಿಯಿದು!

ಕಾಳೀಹುಂಡಿ ಶಿವಕುಮಾರ್, ಮೈಸೂರು
*ಕಾಯಿಸುವ ಹುಡುಗಿಯರನ್ನು ಯಾರೂ ಪ್ರೀತಿಸಬಾರದು, ಏಕೆ?*




ಕಾಯುವಿಕೆಯಲ್ಲೇ ಕಾಯ, ಕಾಯಕ ಕುಗ್ಗಿತೆಂಬ ಭಯ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಕುಡುಕನಿಗೆ ಸಾರಾಯಿ ಅಂಗಡಿಯೇ ಸ್ವರ್ಗ, ರಾಜಕೀಯ ನಾಯಕರಿಗೆ?*



ಸಾರಾಯಿ, ಹೆಂಡದ ದೊರೆಗಳೆಂದರೆ ಸ್ವರ್ಗ!

ಮಾಲತಿರಾಜು, ಬೆಂಗಳೂರು
*ಜೀವನದಲ್ಲಿನ ಸೋಲುಗಳಿಗೆಲ್ಲಾ ಆತ್ಮಹತ್ಯೆಯೊಂದೇ ಪರಿಹಾರವೇ?*
ಹಾಗೇನಿಲ್ಲ, ಕೆಲವೊಮ್ಮೆ ಮದುವೆಯೂ ಪರಿಹಾರವಾಗುತ್ತದೆ. ಆದರೆ ಹಲವರ ಅಭಿಪ್ರಾಯದ ಪ್ರಕಾರ ಎರಡೂ ಒಂದೇ!

ಕೆ. ಮೈಥಿಲಿಕೃಷ್ಣ, ಬೆಂಗಳೂರು
*ಮಾನ್ಯ ಮುಖ್ಯಮಂತ್ರಿಗಳು ದೇವಸ್ಥಾನಗಳಿಗೆ ಪದೇಪದೇ ಹೋಗುತ್ತಿದ್ದಾರಲ್ಲಾ, ದೇವರಿಗೆ ಸಿಟ್ಟು ಬಾರದೆ?*
ಇಲ್ಲ, ಇವರು ಅಲ್ಲಿಗೆ ಹೋಗುವ ಸಮಯ ತಿಳಿದುಕೊಂಡು ದೇವನು ಹೊರಗೆ ಹೊರಟುಬಿಡುತ್ತಾನಂತೆ.

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ
*ಹೆಣ್ಣುಮಕ್ಕಳ ಜಗಳ ಕೊಳಾಯಿ ಹತ್ತಿರ, ಸನ್ಯಾಸಿಗಳ ಜಗಳ ಮಠದಲ್ಲಿ, ರಾಜಕೀಯ ನಾಯಕರದು?*
ಇಂತಲ್ಲಿಯೇ ಕಚ್ಚಾಡಿರಿ ಎಂದು ನಾಯಿಗಳಿಗೆ, ನಾಯಕರಿಗೆ ತಾಕೀತು ಮಾಡಲಾದೀತೆ?

ಸೊ.ನಾ.ಶ್ರೀಧರಮೂರ್ತಿ, ದಾವಣಗೆರೆ
*ಅನುಭವಿಕನಿಗೂ ಅನುಭಾವಿಗೂ ಇರುವ ವ್ಯತ್ಯಾಸವೇನು ರಾಮ್‌ಜಿ ಸಾಬ್?*
ಭವಿಕ ಎಂದರೆ ಸುಖಿ ಎಂದರ್ಥ, ಅನುಭವಿಕ ಸುಖವಾಗಿರುವವನನ್ನು ಅನುಸರಿಸುವ ಚೇಲಾ, ಅನುಭಾವಿ ಜಿಗುಪ್ಸೆ ಹೊಂದಿ ಬಾವಿ ಹುಡುಕುವವನು!

ಹಾಡ್ಯ ಜಯಾನಂದ, ಮೈಸೂರು
*ತಪ್ಪು ಮಾಡಿದವ್ರು ಹೊರಗವ್ರೆ, ತಪ್ಪೇ ಮಾಡದವ್ರು ಒಳಗವ್ರೆ; ಇದು ಯಾರ ತಪ್ಪು?*
ತಪ್ಪೇ ಮಾಡದವರದೇ! ಅವರೂ ತಪ್ಪು ಮಾಡಿದರೆ ಹೊರಗಿರಬಹುದಿತ್ತಲ್ಲ!

■ ರಾಮ್